

بِسۡمِ اللّٰہِ الرَّحۡمٰنِ الرَّحِیۡمِ

# ಜರ್ಮನ್ ಪ್ರವಾಸ : ಇಸ್ಲಾಮ್ ಧರ್ಮದ ನಿಜವಾದ ಸಂದೇಶದ ಪ್ರಚಾರ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 28-04-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ನನಗೆ ಪತ್ರಿಕಾ ಪ್ರತಿನಿಧಿಗಳ ಜೊತೆ ಅಥವಾ ಮುಸ್ಲಿಮೇತರರ ಜೊತೆ ಮಾತನಾಡಲು ಕುಳಿತುಕೊಳ್ಳುವ ಸಂದರ್ಭ ಲಭಿಸುವಾಗಲೆಲ್ಲಾ, ಅಥವಾ ಪ್ರಶ್ನೋತ್ತರದ ಸಂದರ್ಭಗಳಲ್ಲಿ ಯಾವುದಾದರೂ ರೀತಿಯಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಆವಶ್ಯಕವಾಗಿಯೂ ಅವರು ಈ ಪ್ರಶ್ನೆ ಕೇಳುತ್ತಾರೆ: ಲೋಕದಲ್ಲಿ ಇಸ್ಲಾಮ್ ಬಗ್ಗೆ ಇರುವ ಭಯದ ಕಾರಣವೇನು? ಯಾವ ರೀತಿ ಈ ಭಯವನ್ನು ನಿವಾರಿಸಬಹುದು? ಕೆಲವರು ಬಹಿರಂಗವಾಗಿ ಮತ್ತು ಕೆಲವರು ಅಸ್ಪಷ್ಟವಾಗಿ ಹೇಳುತ್ತಾರೆ, ಅಥವಾ ಹೇಳಲು ಇಚ್ಛಿಸುತ್ತಾರೆ– ಪ್ರಾಯಶಃ ಇದಕ್ಕೆ ಕಾರಣ ಇಸ್ಲಾಮ್ ಧರ್ಮದ ಉಪದೇಶಗಳಾಗಿವೆ ಎಂದು. ಈ ಸಾರಿ ಸಹ ಜರ್ಮನಿಯ ಒಬ್ಬ ಜರ್ನಲಿಸ್ಟ್ ಹೀಗೆ ಪ್ರಶ್ನೆ ಕೇಳಿದರು: ಈಗ ಜರ್ಮನಿಯಲ್ಲಿ ಇಸ್ಲಾಮ್ ಬಗ್ಗೆ ಭಯ ವರ್ಧಿಸುತ್ತಿದೆ. ಇದರ ಬಗ್ಗೆ ನೀವು ಯಾವ ರೀತಿ ಪ್ರತಿಕ್ರಿಯೆ ಪ್ರಕಟಿಸುತ್ತೀರಿ. ಇಂತಹ ಪ್ರಶ್ನೆಗಳು ನಮ್ಮ ತಬ್ಲೀಗ್ ಮಾರ್ಗಗಳನ್ನು ತೆರೆಯುತ್ತವೆ. ಮುಸ್ಲಿಮರೆಂದು ತಮ್ಮನ್ನು ಕರೆದುಕೊಳ್ಳುತ್ತಿರುವ ಗುಂಪುಗಳು ಮತ್ತು ವ್ಯಕ್ತಿಗಳು ಇಸ್ಲಾಮಿನ ಹೆಸರಲ್ಲಿ ತಪ್ಪು ಕೃತ್ಯಗಳನ್ನು ಮಾಡುವುದರಿಂದ ಮತ್ತು ಭಯೋತ್ಪಾದಕ ಆಕ್ರಮಣಗಳನ್ನು ಮಾಡುವುದರಿಂದ ಇಸ್ಲಾಮಿನ ಬಗ್ಗೆ ಭಯ ತಲೆದೋರುತ್ತದೆ. ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಯ ಪ್ರಕಾರವೇ ಸಂಭವಿಸಿರುತ್ತದೆ. ಇಂತಹ ಸಮಯದಲ್ಲಿ ವಾಗ್ದತ್ತ ಮಸೀಹ್ ಮತ್ತು ವಾಗ್ದತ್ತ ಮಹ್‌ದಿ ಆಗಮಿಸುವರೆಂದು ಭವಿಷ್ಯ ನುಡಿಯಲಾಗಿದೆ. ಆ ಮಹ್‌ದೀ ಮಸೀಹ್ ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಲೋಕದಲ್ಲಿ ಹರಡುವರೆಂದು ಸಹ ಭವಿಷ್ಯ ನುಡಿಯಲಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಆ ವಾಗ್ದಾನ ಮಾಡಲ್ಪಟ್ಟ ಮಹ್‌ದೀ ಮಸೀಹರಾಗಿ ಭವಿಷ್ಯವಾಣಿ ಪ್ರಕಾರ ಆಗಮಿಸಿದರೆಂದು ನಾವು ನಂಬುತ್ತೇವೆ ಎಂಬುದೇ ನಮ್ಮ ಪ್ರತಿಕ್ರಿಯೆಯಾಗಿದೆ. ನಾವು ಪ್ರತಿಕ್ರಿಯೆ ನೀಡುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ನೀಡಿದ ಉಪದೇಶದ ಪ್ರಕಾರವೇ ಆಗಿದೆ. ಇಸ್ಲಾಮ್ ಧರ್ಮದ ಶಾಂತಿ ಮತ್ತು ಸಂರಕ್ಷಣೆಯ ಉಪದೇಶವನ್ನು ಹರಡಬೇಕೆಂದು ಅವರು ನಮಗೆ ಉಪದೇಶಿಸಿದ್ದಾರೆ.

ಪ್ರತಿಯೊಂದು ರೀತಿಯ ಉಗ್ರವಾದ, ಭಯೋತ್ಪಾದಕ ಕೃತ್ಯ ಮತ್ತು ದೌರ್ಜನ್ಯ ನಡೆಸುವುದು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿವೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಉಪದೇಶಿಸಿದ್ದಾರೆ. ಲೋಕವು ಸೃಷ್ಟಿಸಲ್ಪಟ್ಟ ನಂತರ ಪ್ರತಿಯೊಂದು ದೇಶದ ಸಾತ್ವಿಕರು ಸಾಕ್ಷ್ಯ ನೀಡಿರುವುದು, ಅಲ್ಲಾಹನ ಸ್ವಭಾವ ಗುಣಗಳನ್ನು ಅನುಸರಿಸುವುದು ಮಾನವನ ಬಾಳ್ವೆಗಿರುವ ಒಂದು ಜೀವಜಲವಾಗಿದೆ ಎಂದು. ಅಲ್ಲಾಹನ ಸ್ವಭಾವಗುಣಗಳನ್ನು, ಅವನ ಗುಣ ವಿಶೇಷಗಳನ್ನು ಅನುಜ್ಞೇಯವನ್ನಾಗಿ ಮಾಡಿಕೊಳ್ಳಬೇಕು. ಹಾಗೆ ಮಾಡಿದರೆ ಮಾತ್ರ ಮಾನವನ ಜೀವಿತ ಬೆಳಗುವುದು. ಮನುಷ್ಯನ ಶಾರೀರಿಕ ಮತ್ತು ಆಧ್ಯಾತ್ಮಿಕ ಜೀವನ ಅಲ್ಲಾಹನ ಎಲ್ಲ ಪರಿಶುದ್ಧ ಗುಣಗಳನ್ನು ಅನುಸರಿಸುವುದರಲ್ಲಿ ಅಡಕವಾಗಿದೆ. ಅದು ಸುರಕ್ಷೆಯ ಕಾರಂಜಿಯಾಗಿದೆ.

ಸುರಕ್ಷೆಯ ಕಾರಂಜಿಯಾಗಿರುವ ಅಲ್ಲಾಹನು ಒಬ್ಬ ಮುಸ್ಲಿಮನಿಂದ ಆವಶ್ಯಪಡುವುದೇನೆಂದರೆ, ಪವಿತ್ರ ಖುರ್‌ಆನ್ ಆಜ್ಞಾಪಿಸುವುದೇನೆಂದರೆ ಅಲ್ಲಾಹನ ಗುಣಗಳನ್ನು, ಸ್ವಭಾವಗಳನ್ನು ಅವನು ಹೊಂದಬೇಕೆಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಪವಿತ್ರ ಖುರ್‌ಆನನ್ನು ಸೂರತುಲ್ ಫಾತಿಹದಲ್ಲಿರುವ ಈ ವಚನದಿಂದ ಪ್ರಾರಂಭಿಸಿದ್ದಾನೆ– **ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್.** (ಎಲ್ಲಾ ಸ್ತುತಿ ಸ್ತೋತ್ರಗಳು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ.) ಸರ್ವ ಲೋಕಗಳ ಪರಿಪಾಲಕನಾದ ಸತ್ಯಸ್ವರೂಪಿಯಾಗಿರುವ ಮತ್ತು ಪರಿಪೂರ್ಣನಾದ ಅಲ್ಲಾಹನನ್ನು ನಂಬುವುದು ಪ್ರತಿಯೊಬ್ಬ ಮನುಷ್ಯನಿಗೆ ಕಡ್ಡಾಯವಾಗಿದೆ. ಸರ್ವಲೋಕಗಳ ಪರಿಪಾಲಕನೆಂದು ಹೇಳಿದ ಕಾರಣ ಅವನ ಪರಿಪಾಲಕ ಗುಣ ಯಾವುದೇ ವಿಶಿಷ್ಟ ಜನಾಂಗಕ್ಕೆ ಸೀಮಿತವಾಗಿಲ್ಲ. ಯಾವುದೇ ವಿಶಿಷ್ಟ ಕಾಲಘಟ್ಟಕ್ಕೂ ಸೀಮಿತವಾಗಿಲ್ಲ. ಯಾವುದೇ ವಿಶಿಷ್ಟ ದೇಶಕ್ಕೂ ಸೀಮಿತವಾಗಿಲ್ಲ. ಅವನು ಎಲ್ಲ ಜನಾಂಗಗಳ ಪರಿಪಾಲಕನಾಗಿದ್ದಾನೆ. ಎಲ್ಲ ಕಾಲಘಟ್ಟಗಳ ಪರಿಪಾಲಕನಾಗಿದ್ದಾನೆ. ಎಲ್ಲ ಸ್ಥಳಗಳ ಪರಿಪಾಲಕನಾಗಿದ್ದಾನೆ. ಎಲ್ಲ ದೇಶಗಳ ಪರಿಪಾಲಕನಾಗಿದ್ದಾನೆ. ಎಲ್ಲ ಅನುಗ್ರಹಗಳ ಉದ್ಭವ ಸ್ಥಾನ ಅವನಾಗಿದ್ದಾನೆ. ಎಲ್ಲ ಶಾರೀರಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳು ಅವನಿಂದಲೇ ದೊರಕುವುದಾಗಿದೆ. ಅವನ ಮೂಲಕವೇ ಎಲ್ಲ ಸೃಷ್ಟಿಗಳು ಪಾಲನೆ ಪೋಷಣೆ ಪಡೆಯುತ್ತವೆ. ಪ್ರತಿಯೊಂದು ವಸ್ತುವಿಗೆ ಆಶ್ರಯ ನೀಡುವವನು ಅವನೇ ಆಗಿದ್ದಾನೆ.

ಪವಿತ್ರ ಖುರ್‌ಆನ್ ಮೂಲಕ ಗಳಿಸಿದ ಜ್ಞಾನದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ನೀಡಿದ ಉಪದೇಶ ಇದೇ ಆಗಿದೆ. ಲೋಕದಲ್ಲಿ ಶಾಂತಿ ಮತ್ತು ಸುರಕ್ಷೆ ಹರಡಲು ಆವಶ್ಯಕವಾದುದು ಇದೇ ಆಗಿದೆ. ಲೋಕದಲ್ಲಿ ಶಾಂತಿಯ ತಳಪಾಯ ಹಾಕಬಹುದಾದ ಉಪದೇಶ ಇದೇ ಆಗಿದೆ. ಅಹ್ಮದಿಯಾ ಜಮಾಅತಿನ ಜನರು ಲೋಕದ ಪ್ರತಿಯೊಂದು ಮೂಲೆಗೂ ತಲಪಿಸಲು ಪ್ರಯತ್ನಿಸುತ್ತಿರುವುದು ಇದೇ ಸಂದೇಶವನ್ನಾಗಿದೆ. ನಾವು ಈ ಪ್ರಯತ್ನದಲ್ಲೇ ಮಗ್ನರಾಗಿರಬೇಕಾಗಿದೆ. ಒಟ್ಟಿನಲ್ಲಿ, ಕೆಲವು ಜನರು ಇಸ್ಲಾಮ್ ಧರ್ಮದ ಹೆಸರಿನಲ್ಲಿ ಗಲಬೆಗೊಂದಲಗಳನ್ನು

ಸೃಷ್ಟಿಸುತ್ತಿರುವುದು, ಅವರು ಇಸ್ಲಾಮ್ ಧರ್ಮದ ತತ್ವಗಳನ್ನು ಅನುಸರಿಸುತ್ತಿರುವ ಕಾರಣದಿಂದಲ್ಲ, ಬದಲಾಗಿ ಇಸ್ಲಾಮ್ ಧರ್ಮ ತತ್ವಗಳಿಂದ ದೂರ ಸರಿದ ಕಾರಣದಿಂದಾಗಿದೆ. ಈ ಕಾಲಘಟ್ಟದಲ್ಲಿ ಅಲ್ಲಾಹನಿಂದ ಕಳುಹಿಸಲ್ಪಟ್ಟ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸನನ್ನು ನಂಬದ ಕಾರಣದಿಂದ ಅವರು ಈ ರೀತಿ ಮಾಡುತ್ತಿದ್ದಾರೆ.

ನಾವು ಈ ಉಪದೇಶಗಳ ಬೆಳಕಿನಲ್ಲಿ ಲೋಕಕ್ಕೆ ಶಾಂತಿ, ಭ್ರಾತೃತ್ವ, ಸೌಹಾರ್ದ ಮತ್ತು ಸಾಮರಸ್ಯದ ಮಾರ್ಗ ತೋರಿಸುವಾಗ ಬಹುತೇಕ ಸಜ್ಜನರಾದ ಮುಸ್ಲಿಮೇತರ ಜನರ ಬಾಯಿಯಿಂದ ಅಚಾನಕವಾಗಿ ಇಂತಹ ಮಾತುಗಳು ಹೊರಬರುತ್ತವೆ– ಇಸ್ಲಾಮಿನ ತತ್ವಗಳು ಬಹಳ ಸುಂದರವಾಗಿವೆ. ಇತ್ತೀಚೆಗೆ ನಾನು ಜರ್ಮನಿಯಲ್ಲಿ ಪ್ರವಾಸ ಮಾಡುತ್ತಾ ಇದ್ದಾಗ ಸಹ ಇಂತಹ ಮಾತುಗಳು ಕೇಳಿಸಿದುವು. ವಾಲ್ಡ್‌ಶಟ್ ನಗರದಲ್ಲಿ ಬೈತುಲ್ ಆಫಿಯತ್ ಎಂಬ ಹೆಸರಿನ ಮಸ್‌ಜಿದನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಒಬ್ಬ ಡಾಕ್ಟರ್ ಹೇಳಿದರು: ಶಾಂತಿ ಪ್ರಿಯರಾದ ಮುಸ್ಲಿಮರನ್ನು ಭೇಟಿಯಾಗಬೇಕೆಂಬುದು ನನ್ನ ಜೀವಿತ ಕಾಲದ ಅನ್ವೇಷಣೆಯಾಗಿತ್ತು. ಇಂದು ನೀವು ನನ್ನ ಈ ಆಶೆಯನ್ನು ಈಡೇರಿಸಿದಿರಿ. ಇಂದು ಈ ಜನರನ್ನು ಭೇಟಿಯಾದ ಕಾರಣ ನಾನು ನನ್ನನ್ನು ಅದೃಷ್ಟಶಾಲಿ ಎಂದು ಭಾವಿಸುತ್ತೇನೆ.

ಇಟಲಿ ದೇಶದ ಒಬ್ಬ ಮಹಿಳೆ ತನ್ನ ಸ್ನೇಹಿತನ ಜೊತೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ್ದರು. ಆ ಮಹಿಳೆ ಹೇಳಿದರು: ನನ್ನ ಸ್ನೇಹಿತ ಈ ಸಮಾರಂಭದಲ್ಲಿ ಭಾಗವಹಿಸುವ ಬಗ್ಗೆ ಗಾಬರಿ ಹೊಂದಿದ್ದರು. ಅವರಿಗೆ ಇಸ್ಲಾಮ್ ಬಗ್ಗೆ ನಕಾರಾತ್ಮಕ ಭಾವನೆಗಳಿದ್ದುವು. ಆದರೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಹ್ಮದಿಯ ಜಮಾಅತಿನ ಇಮಾಮರ ಭಾಷಣ ಆಲಿಸಿದ ನಂತರ ಇಸ್ಲಾಮಿನ ಬಗ್ಗೆ ಆತನ ಅಭಿಪ್ರಾಯ ಸಂಪೂರ್ಣ ಬದಲಾಯಿಸಿತು. ನನ್ನ ಸ್ನೇಹಿತ ತನ್ನ ಮೊಬೈಲ್ ಮೂಲಕ ತನ್ನ ಒಬ್ಬ ಮುಸ್ಲಿಮ್ ಗೆಳೆಯನಿಗೆ ಕೂಡಲೆ ಮೆಸೇಜ್ ಕಳುಹಿಸಿದನು– ನಿಮ್ಮ ಧರ್ಮ ಎಷ್ಟು ಸುಂದರವಾಗಿದೆ ಎಂದು ನನಗೆ ಇಂದು ತಿಳಿಯಿತು.

ಒಬ್ಬ ಅತಿಥಿ ಹೇಳಿದರು: ನಿಮ್ಮ ಸಭೆಯಲ್ಲಿ ಭಾಗವಹಿಸಿ ಅನುಗ್ರಹ ಪಡೆದುಕೊಳ್ಳಲು ನನಗೆ ಸಂದರ್ಭ ಲಭಿಸಿತು. ಇಲ್ಲಿಗೆ ಆಗಮಿಸಿದುದು ನನಗೆ ಗೌರವಾರ್ಹವಾಗಿದೆ. ಇಂದು ನಾನು ಇಲ್ಲಿಗೆ ಬರದೆ ಇರುತ್ತಿದ್ದರೆ ಬಹಳ ದೊಡ್ಡ ವಸ್ತುವನ್ನು ನಾನು ಕಳೆದುಕೊಳ್ಳುತ್ತಿದ್ದೆ. ಅಹ್ಮದಿಯಾ ಜಮಾಅತ್ ಮೂಲಕ ನನಗೆ ನೈಜ ಇಸ್ಲಾಮಿನ ಪರಿಚಯ ಗಳಿಸಲು ಸಾಧ್ಯವಾಯಿತು. ಟಿ.ವಿ. ಚ್ಯಾನಲ್‌ಗಳ ಮೂಲಕ ದ್ವೇಷ ಮತ್ತು ಭಯೋತ್ಪಾದನೆಯನ್ನು ಪ್ರತಿಪಾದಿಸುವ ಇಸ್ಲಾಮಿಗಿಂತ ಅದು ವಿಭಿನ್ನವಾಗಿದೆ. ಇಲ್ಲಿ ನನಗೆ ಶಾಂತಿ ಮತ್ತು ಪ್ರೀತಿ ದೊರಕಿತು. ಕೇವಲ ಶಾಂತಿ ಮತ್ತು ಪ್ರೀತಿಯ ಶಬ್ದಗಳನ್ನು ಮಾತ್ರವಲ್ಲ, ದ್ವೇಷವಿಲ್ಲದೆ ಪ್ರೀತಿಯಿಂದ ವರ್ತಿಸುವ ಜನರನ್ನು ಸಹ ಇಲ್ಲಿ ನಾನು ಕಂಡೆನು ಎಂದು ಹೇಳಿದರು. ಹಾಗೆ ಪ್ರತಿಯೊಬ್ಬ ಅಹ್ಮದಿಯ ವೈಯಕ್ತಿಕ ಕೆಲಸಗಳು ಸಹ ಮೌನವಾಗಿ ತಬ್ಲೀಗ್ ಮಾಡುವವುಗಳಾಗಿರುತ್ತವೆ.

ನಮ್ಮ ಪ್ರತಿಭಾಶಾಲಿಗಳಾದ ಅಹ್ಮದಿ ಮಕ್ಕಳು ಸಹ ತಮ್ಮ ಸುತ್ತುಮುತ್ತಲು ಉತ್ತಮ ಪ್ರಭಾವ ಬೀರುತ್ತಿದ್ದಾರೆ. ಇದರ ಬಗ್ಗೆ ಸಹ ಅಭಿಪ್ರಾಯ ತಿಳಿಯಲಾಯಿತು. ಒಬ್ಬ ಅತಿಥಿ ಮಹಿಳೆ ಹೇಳಿದರು: ನಾನು ನಿಮಗೆ ಕೃತಜ್ಞತೆ ಅರ್ಪಿಸುತ್ತೇನೆ. ನನ್ನ ಮಕ್ಕಳು ಅಹ್ಮದಿ ಮಕ್ಕಳೊಂದಿಗೆ ಸ್ನೇಹ ಸಂಬಂಧ ಹೊಂದಿದ್ದಾರೆ. ಅವರು ಅಹ್ಮದಿ ಮಕ್ಕಳ ಸ್ನೇಹಿತರಾದ ನಂತರ ಅವರಲ್ಲಿ ಒಳ್ಳೆಯ ಬದಲಾವಣೆಯನ್ನು ಕಂಡೆನು. ಅದರ ಕಾರಣವೇನೆಂದು ನಾನು ತಿಳಿಯಲು ಬಯಸಿದ್ದೆ. ನಿಮ್ಮ ಉಪದೇಶಗಳ ಬಗ್ಗೆ ತಿಳಿಯಲು ಇಚ್ಛಿಸಿದ್ದೆ. ಇಂದು ಇಲ್ಲಿಗೆ ಆಗಮಿಸಿದ ನಂತರ ನನಗೆ ತಿಳಿಯಿತು. ನನ್ನ ಮಕ್ಕಳು ಉತ್ತಮ ಸ್ನೇಹಿತರೊಂದಿಗಿದ್ದಾರೆ ಮತ್ತು ಅವರು ಸುರಕ್ಷಿತರಾಗಿದ್ದಾರೆ ಎಂದು.

ಮಕ್ಕಳಿಂದ ನಡೆಯುತ್ತಿರುವ ಈ ಮೌನವಾದ ತಬ್ಲೀಗ್ ಅಹ್ಮದಿ ತಂದೆ ತಾಯಂದಿರ ಮೇಲೆ ಹೆಚ್ಚಿನ ಜವಾಬ್ದಾರಿ ಹೊರಿಸುತ್ತಿದೆ. ಅವರು ತಮ್ಮ ಮಕ್ಕಳನ್ನು ತರಬೇತಿ ಮಾಡುವ ಮಟ್ಟವನ್ನು ವರ್ಧಿಸುತ್ತಾ ಇರಬೇಕು. ಅವರಿಗೋಸ್ಕರ ಪ್ರಾರ್ಥಿಸಬೇಕು. ಅಹ್ಮದಿ ಮಕ್ಕಳು ಯಾವಾಗಲೂ ಅನ್ಯರ ಮೇಲೆ ಉತ್ತಮ ಪ್ರಭಾವ ಬೀರುವವರಾಗಬೇಕು ಮತ್ತು ಕೆಡುಕುಗಳಿಂದ ತಮ್ಮನ್ನು ರಕ್ಷಿಸುವವರಾಗಬೇಕು. ಈ ಉತ್ತಮ ಪ್ರಭಾವಗಳು ಮುಂದಿನ ಕಾಲದಲ್ಲಿ ಇನ್‌ಶಾಅಲ್ಲಾಹ್ ನೈಜ ಇಸ್ಲಾಮಿನ ಸಂದೇಶವನ್ನು ಹರಡುವ ಕೆಲಸ ಮಾಡುವುದು. ಆ ಮಕ್ಕಳು ಅಹ್ಮದಿ ಮಕ್ಕಳೊಂದಿಗೆ ಆಟವಾಡುತ್ತಾ ಬೆಳೆಯುತ್ತಿರುವಾಗ, ಅಹ್ಮದಿ ಮಕ್ಕಳು ತಮ್ಮನ್ನು ಇಸ್ಲಾಮಿನ ಉಪದೇಶಗಳಿಗನುಸಾರವಾಗಿ ರೂಪಿಸುತ್ತಿರುವಾಗ, ಇನ್‌ಶಾಅಲ್ಲಾಹ್ ಆ ಮುಸ್ಲಿಮೇತರ ಮಕ್ಕಳಲ್ಲಿ ಅನೇಕರು ಇಸ್ಲಾಮ್ ಧರ್ಮಕ್ಕೆ ಸೇರುವವರಾಗುವರು.

ಆಗ್ಸ್‌ಬರ್ಗ್‌ನಲ್ಲಿ ಬೈತುನ್ನಸೀರ್ ಮಸ್‌ಜಿದ್ ಉದ್ಘಾಟಿಸಲ್ಪಟ್ಟಿತು. ಇದು ದೊಡ್ಡ ನಗರವಾಗಿದೆ. ಇಲ್ಲಿರುವ ಅನೇಕ ವಿದ್ಯಾವಂತರು ಆಗಮಿಸಿದ್ದರು. ರಾಜಕಾರಣಿಗಳು ಸಹ ಆಗಮಿಸಿದ್ದರು. ಒಬ್ಬ ಅತಿಥಿ ಹೇಳಿದರು: ಇಲ್ಲಿ ನೀಡಲಾಗುತ್ತಿರುವ ಸಂದೇಶ ಬಹಳ ಸುಂದರವಾಗಿವೆ. ಇಸ್ಲಾಮೀ ದೇಶಗಳ ಬಹುತೇಕ ಜನರಿಗೆ ಇದನ್ನು ತಲಪಿಸಬೇಕೆಂದು ನಾನು ಆಶಿಸುತ್ತೇನೆ. ಇದರಿಂದ ಬಹಳ ಹೆಚ್ಚು ಶಾಂತಿ ಸ್ಥಾಪಿಸಲ್ಪಡುವುದು ಎಂದು ಹೇಳಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಪ್ರೇಮಿಯ ಮೂಲಕ ಇಸ್ಲಾಮ್ ಧರ್ಮದ ಪುನಶ್ಚೇತನ ಆಗಬೇಕಾಗಿದೆ ಎಂದು ಮುಸ್ಲಿಮರು ಮತ್ತು ಮುಸ್ಲಿಮ್ ದೇಶಗಳು ಮನವರಿಕೆ ಮಾಡಿಕೊಂಡಿದ್ದರೆ ಎಷ್ಟು ಚೆನ್ನಾಗಿತ್ತು! ಅವರು ಈ ಸತ್ಯಸಂಧನಾದ ಪ್ರೇಮಿಗೆ ಸಹಾಯ ಮಾಡುವವರು ಆಗಬೇಕಾಗಿತ್ತು. ಅವರ ಕೆಲಸವನ್ನು ತಡೆಯುವವರೂ ಅವರ ವಿರುದ್ಧ ಹಗೆತನ ಹುಟ್ಟಿಸುವವರೂ ಆಗಬಾರದು.

ಒಬ್ಬ ಜರ್ಮನ್ ಅಧ್ಯಾಪಿಕೆ ಹೇಳಿದರು: ನನ್ನ ಶಾಲೆಯ ಮಕ್ಕಳಿಗೆ ಇಸ್ಲಾಮಿಗೆ ಸಂಬಂಧಿಸಿದ ಅವರ ಪ್ರಶ್ನೆಗಳಿಗೆ ಉತ್ತರ ನೀಡಲು ನನಗೆ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಮಾಧ್ಯಮಗಳಲ್ಲಿ ಇಸ್ಲಾಮ್ ಧರ್ಮಕ್ಕೆ ವಿರುದ್ಧವಾಗಿ ಸಂಗತಿಗಳು ಪ್ರಕಟವಾಗುತ್ತಿರುತ್ತವೆ. ಇಂದು ಅಹ್ಮದಿಯಾ ಜಮಾಅತಿನ ಖಲೀಫರ ಭಾಷಣದಿಂದ ನನಗೆ ಎಷ್ಟು ಮಾಹಿತಿ ಲಭಿಸಿದೆ ಎಂದರೆ ಇನ್ನು ಮುಂದೆ ನಾನು ವಿದ್ಯಾರ್ಥಿಗಳಿಗೆ

ಇಸ್ಲಾಮ್ ಧರ್ಮದ ವಾಸ್ತವಿಕ ಉಪದೇಶಗಳನ್ನು ತಿಳಿಸಬಲ್ಲೆನು. ಇನ್ನೊಬ್ಬ ಮಹಿಳೆ ಹೇಳಿದರು: ನಿಮ್ಮ ಖಲೀಫರ ಮಾತುಗಳನ್ನು ಆಲಿಸಿ ನನ್ನ ಹೃದಯ ಬಹಳ ಪ್ರಭಾವಿತವಾಗಿದೆ. ಇಸ್ಲಾಮ್ ಧರ್ಮ ತತ್ವಗಳು ಇಷ್ಟು ಸುಂದರವಾಗಿವೆ ಎಂದು ನಾನು ತಿಳಿದಿರಲಿಲ್ಲ. ಈ ಮಾತುಗಳನ್ನು ಆಲಿಸಿದ ನಂತರ ನನ್ನ ಹೃದಯದಲ್ಲಿ ಪ್ರಶ್ನೆ ಉದಿಸುತ್ತಿದೆ– ಇಷ್ಟು ಸುಂದರ ಉಪದೇಶಗಳನ್ನು ಇಸ್ಲಾಮ್ ಹೊಂದಿದ್ದರೂ ಅದು ಕೆಟ್ಟ ಹೆಸರು ಗಳಿಸಲು ಕಾರಣವೇನು? ನೀವು ಪ್ರತಿಪಾದಿಸುವ ಇಸ್ಲಾಮ್ ಎಲ್ಲೆಡೆ ಹರಡಲಿ ಮತ್ತು ಅದು ಎಲ್ಲರಿಗೂ ತಲಪಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಆಗ್ಸ್‌ಬರ್ಗ್ ಯುನಿವರ್ಸಿಟಿಯ ಒಬ್ಬ ಪ್ರೊಫೆಸರ್ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರು ಹೇಳಿದುದು ವಾಸ್ತವಿಕವಾಗಿಯೂ ನಿಮ್ಮ ಸಂದೇಶವಾಗಿದ್ದರೆ ನೀವು ಬಹಳ ಜಯಶಾಲಿಯಾಗುವಿರಿ. ಆ ಪ್ರೊಫೆಸರ್ ಎಷ್ಟು ಪ್ರಭಾವಿತರಾಗಿದ್ದಾರೆಂದರೆ ಯುನಿವರ್ಸಿಟಿಯಲ್ಲಿ ಇಸ್ಲಾಮೀ ಪ್ರದರ್ಶನ ಜರಗಿಸಬೇಕೆಂದು ಪ್ರಸ್ತಾಪಿಸಿದರು. ಜಮಾಅತ್ ಜನ ಸಮೂಹದಲ್ಲಿ ಹೆಚ್ಚು ಎದ್ದು ಕಾಣುವಂತಾಗಬೇಕೆಂದೂ ನಿಮ್ಮ ಸಂದೇಶ ಎಲ್ಲರಿಗೂ ತಲಪಬೇಕೆಂದೂ ಅವರು ಹೇಳಿದರು.

ಒಬ್ಬ ಡಾಕ್ಟರ್ ಮಹಿಳೆ ಹೇಳಿದರು: ಖಲೀಫರ ಭಾಷಣ ಹೃದಯದಲ್ಲಿ ಗಾಢವಾಗಿ ಪ್ರಭಾವ ಬೀರುವುದಾಗಿದೆ. ಅದು ಪ್ರೀತಿ ಮತ್ತು ಶಾಂತಿಯ ಸಂದೇಶವಾಗಿದೆ. ನಮ್ಮಲ್ಲಿ ಪ್ರತಿಯೊಬ್ಬನು ಇಸ್ಲಾಮಿನ ಉಪದೇಶ ಪ್ರಕಾರ ತಮ್ಮ ನೆರೆಹೊರೆಯವರ ಬಗ್ಗೆ ಲಕ್ಷ್ಯ ನೀಡುವುದಾದರೆ ಲೋಕವು ಎಷ್ಟೋ ಹೆಚ್ಚು ಸುಂದರವಾಗುವುದು. ಇನ್ನೊಬ್ಬ ಮಹಿಳೆ ಹೇಳಿದರು: ನೆರೆಹೊರೆಯವರ ಹಕ್ಕುಗಳ ಬಗ್ಗೆ ಪ್ರತಿಪಾದಿಸಲಾಗಿದೆ. ಇದು ಬಹಳ ಮೆಚ್ಚುಗೆಯಾಯಿತು. ನಾವು ಈ ಉಪದೇಶದ ಒಂದು ಭಾಗವನ್ನಾದರೂ ಅನುಷ್ಠಾನಕ್ಕೆ ತರುವುದಾದರೆ ಲೋಕವು ಮೊದಲಿಗಿಂತ ಬಹಳ ಹೆಚ್ಚು ಶಾಂತಿಭರಿತವೂ ಸುಖಕರವೂ ಆಗುವುದು.

ಪೋಲೀಸು ವಿಭಾಗದ ಒಬ್ಬ ತುರ್ಕಿ ಅತಿಥಿ ಹೇಳಿದರು: ಇಂದಿನ ಸಮಾರಂಭ ಮತ್ತು ನಿಮ್ಮ ಭಾಷಣದಿಂದ ಬಹಳ ಪ್ರಭಾವಿತನಾಗಿರುವೆನು. ನೀವು ಈ ರೀತಿ ಇಸ್ಲಾಮಿನ ಸಂದೇಶ ವಿವಿಧ ಸ್ಥಳಗಳಲ್ಲಿ ತಲಪಿಸುವುದಾದರೆ ಬೇಗನೆ ಬಹಳ ಜಯಗಳಿಸುವಿರಿ. ನಾನು ಪೋಲೀಸ್ ವಿಭಾಗದವನಾಗಿರುವೆ. ಇಷ್ಟು ಸುವ್ಯವಸ್ಥಿತ ಕಾರ್ಯಕ್ರಮ ಎಲ್ಲಿಯೂ ನಾನು ಕಂಡಿಲ್ಲ. ನಿಮ್ಮ ವ್ಯವಸ್ಥೆಯಿಂದ ನಾನು ಬಹಳಷ್ಟು ಕಲಿತುಕೊಂಡಿದ್ದೇನೆ. ಸಿರಿಯಾದ ಒಬ್ಬ ಸ್ನೇಹಿತ ತನ್ನ ಅಭಿಪ್ರಾಯ ಹೀಗೆ ಪ್ರಕಟಿಸಿದರು: ನೀವು ಬೇರೆ ಮುಸ್ಲಿಮರಿಗಿಂತ ಬಹಳ ಉತ್ತಮ ರೀತಿಯಲ್ಲಿ ಇಸ್ಲಾಮೀ ಧರ್ಮ ತತ್ವಗಳನ್ನು ವಿವರಿಸಿರುವಿರಿ. ನಿಮ್ಮ ಜಮಾಅತ್ ಕುರಿತು ನಾನು ಇನ್ನಷ್ಟು ಮಾಹಿತಿ ಗಳಿಸುವೆನು. ಪ್ರಾಯಶಃ ನಾನು ಬೈಅತ್ ಮಾಡಿ ಜಮಾಅತ್‌ಗೆ ಸೇರುವೆನು. ಇಲ್ಲಿಗೆ ಆಗಮಿಸುವ ಮೊದಲು, ಅಹ್ಮದಿಯರ ಖುರ್‌ಆನ್ ಬೇರೆ ಎಂದು ನಾನು ಕೇಳಿದ್ದೆ. ಆದರೆ ಅವರ ಹೇಳಿಕೆ ತಪ್ಪೆಂದು ನನಗೆ ಈಗ ತಿಳಿಯಿತು.

ಮಾರ್‌ಬರ್ಗ್ ಎಂಬ ನಗರದಲ್ಲಿ ಮಸ್‌ಜಿದ್‌ಗೆ ಅಸ್ತಿಭಾರ ಹಾಕಲಾಯಿತು. ಅಲ್ಲಿನ ಸಮಾರಂಭದಲ್ಲಿ ಭಾಗವಹಿಸಿದ ಒಬ್ಬ ಮಹಿಳೆ ಹೇಳಿದರು: ನೆರೆಹೊರೆಯರ ಹಕ್ಕುಗಳ ಬಗ್ಗೆ ಉಪದೇಶಗಳು ನನ್ನನ್ನು ಪ್ರಭಾವಿಸಿದೆ. ಒಬ್ಬ ಕ್ರೈಸ್ತಳಾದ ನಾನು ಕ್ರೈಸ್ತ ಧರ್ಮ ಸಹ ಈ ಉಪದೇಶಗಳನ್ನು ತಮ್ಮದನ್ನಾಗಿ ಮಾಡಬೇಕೆಂದು ನಾನು ಇಚ್ಛಿಸುತ್ತೇನೆ. ಮತ್ತೊಬ್ಬ ಅತಿಥಿ ಹೇಳಿದರು: ಮಹಿಳೆಯರ ಸ್ಥಾನದ ಬಗ್ಗೆ ನೀವು ಹೇಳಿದುದು ಅತ್ಯಂತ ಸುಂದರ ಧಾರ್ಮಿಕ ಉಪದೇಶವಾಗಿದೆ. ನಿಮ್ಮ ಧರ್ಮದಲ್ಲಿ ಪುರುಷ ಮತ್ತು ಮಹಿಳೆಯ ಹಕ್ಕುಗಳ ಸಮತೋಲನ ಸ್ಥಿತಿ ನನಗೆ ಬಹಳ ಇಷ್ಟಕರವಾಯಿತು.

ಆ ನಗರದ ಮೇಯರ್ ಹೇಳಿದರು: ಖೇದಕರವಾಗಿ ಮುಸ್ಲಿಮರ ವಿರುದ್ಧ ಎಷ್ಟು ತಪ್ಪು ಆರೋಪಗಳನ್ನು ಮಾಡಲಾಗುತ್ತಿದೆ ಎಂದರೆ ಅವರು ಉತ್ತರ ನೀಡುವಾಗ ಸಾಕ್ಷ್ಯಾಧಾರಗಳನ್ನು ನೀಡಬೇಕಾಗುತ್ತದೆ. ಆದರೆ ಒಬ್ಬ ಕ್ರೈಸ್ತ ಯಾವುದಾದರೂ ದೌರ್ಜನ್ಯ ಕೃತ್ಯ ನಡೆಸಿದರೆ, ಇತ್ತೀಚೆಗೆ ನಾರ್ವೇಯಲ್ಲಿ ಒಬ್ಬ ಹಂತಕನು ಕ್ರೈಸ್ತ ಧರ್ಮದ ಹೆಸರಲ್ಲಿ ಹತ್ಯೆ ಮಾಡಿದ. ಹಾಗೆ ಮಾಡಿದರೆ ಅದು ಕ್ರೈಸ್ತ ಧರ್ಮದ ಕಾರಣದಿಂದ ಎಂದು ಯಾರೂ ದೋಷಾರೋಪ ಮಾಡುವುದಿಲ್ಲ.

ಮಿಸ್ಸೆಸ್ ಜೂಲಿಯ ಎಂಬ ಮಹಿಳೆ ಹೇಳಿದರು: ಬಹಳ ಉತ್ತಮ ರೀತಿಯಲ್ಲಿ ಜರಗಿಸಲಾಗುವ ಈ ಸಮಾರಂಭದ ಭಾಷಣದ ಈ ಅಂಶ ನನಗೆ ಬಹಳ ಇಷ್ಟಕರವಾಯಿತು. ಮನುಷ್ಯರ ಹಕ್ಕುಗಳನ್ನು ಈಡೇರಿಸುವುದಿಲ್ಲವಾದರೆ ಆರಾಧನೆಯಿಂದ ಪ್ರಯೋಜನವೇನು? ನಾನು ಇಲ್ಲಿಗೆ ಬರುವಾಗ, ಇಸ್ಲಾಮ್ ಮೂಲಭೂತವಾದಿ ಮತ್ತು ಉಗ್ರಗಾಮಿ ಉಪದೇಶ ನೀಡುತ್ತದೆ ಎಂದು ಭಾವಿಸಿದ್ದೆ. ಆದರೆ ಇಂದಿನ ಸಮಾರಂಭ ಇಸ್ಲಾಮಿನ ಬಗ್ಗೆ ನನ್ನ ನಕಾರಾತ್ಮಕ ಯೋಚನೆಗಳನ್ನು ನೀಗಿಸಿದೆ. ಇಸ್ಲಾಮಿನ ಪ್ರೀತಿ ಮತ್ತು ಶಾಂತಿಗೆ ಸಂಬಂಧಿಸಿದ ಉಪದೇಶಗಳನ್ನು ಬಹಳ ಉತ್ತಮವಾಗಿ ಮನವರಿಕೆ ಮಾಡಿರುವೆನು.

ಮಸ್‌ಜಿದ್‌ಗಳ ಉದ್ಘಾಟನೆ ಮತ್ತು ಅಸ್ತಿಭಾರ ಹಾಕುವ ಸಂದರ್ಭಗಳಲ್ಲಿ ಟಿ.ವಿ. ರೇಡಿಯೋ ಮತ್ತು ಪತ್ರಿಕೆಗಳ ಮೂಲಕ ಕೋಟಿಗಟ್ಟಲೆ ಜನರಿಗೆ ಅಹ್ಮದಿಯ್ಯತ್‌ನ ಸಂದೇಶ ತಲಪಿದೆ. ನಾನು ವಿದೇಶ ಪ್ರಯಾಣ ಮಾಡಿ ಮರಳಿದಾಗ ಆ ದೇಶಗಳ ಸ್ಥಿತಿಯ ಬಗ್ಗೆ ಪ್ರಸ್ತಾಪಿಸುತ್ತೇನೆ. ಆದರೆ ಇಲ್ಲಿ ಎಂದರೆ ಯು.ಕೆ.ಯಲ್ಲಿ ಸಹ ಬಹಳ ಉತ್ತಮ ಕೆಲಸ ನಡೆಯುತ್ತಿದೆ. ಇಸ್ಲಾಮಿನ ನೈಜ ತತ್ವಗಳನ್ನು ಹರಡಲು ಅಲ್ಲಾಹನ ಅನುಗ್ರಹದಿಂದ ಒಳ್ಳೆಯ ಕೆಲಸ ಮಾಡಲಾಗುತ್ತಿದೆ. ವಿವಿಧ ಶಾಖೆಗಳು ಸಹ ಕೆಲಸ ಮಾಡುತ್ತಿವೆ. ತಬ್ಲೀಗ್ ವಿಭಾಗ ಸಹ ಕೆಲಸ ಮಾಡುತ್ತಿದೆ. ಮಾರ್ಚ್ ತಿಂಗಳಲ್ಲಿ ಇಲ್ಲಿ ಪೀಸ್ ಕಾನ್‌ಫರೆನ್ಸ್ ಜರಗಿಸಲಾಯಿತು. ಅದರ ಮೂಲಕ ಯು.ಕೆ.ಯಲ್ಲೂ ಲೋಕದ ಇತರ ಸ್ಥಳಗಳಲ್ಲಿಯೂ ಇಸ್ಲಾಮಿನ ಸಂದೇಶ ವಿಶಾಲವಾಗಿ ತಲಪಿಸಲಾಗಿದೆ.

ಪೀಸ್ ಸಿಂಪೋಸಿಯಂನಲ್ಲಿ ಭಾಗವಹಿಸಿದ ಕೆಲವು ಅತಿಥಿಗಳ ಅಭಿಪ್ರಾಯಗಳನ್ನು ಸೂಚಿಸುತ್ತೇನೆ. ಚರ್ಚಿನ ವಾರ್ಡನ್ ಆಗಿರುವ ಒಬ್ಬ ಮಹಿಳೆ ಹೇಳಿದರು: ಇಲ್ಲಿ ನಾನು ಬಹಳ ಆಸಕ್ತಿದಾಯಕ ಮಹತ್ವಪೂರ್ಣ ಸಂದೇಶ ಆಲಿಸಿದೆ. ಇಂದಿನ ಸಮಾಜಕ್ಕೆ ಆವಶ್ಯಕವಾದ ಐಕ್ಯತೆಯ ಸಂದೇಶ ನೀಡಲಾಗಿದೆ. ಪವಿತ್ರ ಖುರ್‌ಆನಿನ ಒಂದು ವಚನವನ್ನು ಉಲ್ಲೇಖಿಸಿ ಅಹ್ಮದಿಯಾ ಜಮಾಅತಿನ ಇಮಾಮರು ಹೇಳಿದುದು ನನಗೆ ಬಹಳ ಇಷ್ಟಕರವಾಯಿತು. ವಿವಿಧ

ಧರ್ಮದ ಜನರು ಸಹಮತ ಹೊಂದಿದ ವಿಷಯಗಳಲ್ಲಿ ಪರಸ್ಪರ ಐಕ್ಯತೆಯಿಂದ ವರ್ತಿಸಬೇಕೆಂದು ಅವರು ಹೇಳಿದರು. ಅದು ನನಗೆ ಬಹಳ ಮೆಚ್ಚಿಗೆಯಾಯಿತು. ಆರಾಧನೆ ಬಗ್ಗೆ ಹೇಳಿದುದು ನನಗೆ ಇಷ್ಟಕರವಾಯಿತು. ಐದು ಹೊತ್ತಿನ ಆರಾಧನೆ ಆವಶ್ಯಕವಾಗಿದೆ ಎಂದು. ಆದರೆ ಸೃಷ್ಟಿಗಳ ಸೇವೆ ಮಾಡುವುದಿಲ್ಲವಾದರೆ ಆರಾಧನೆಯಿಂದ ಪ್ರಯೋಜನವಿಲ್ಲವೆಂದು ಅವರು ಹೇಳಿದರು. ಒಬ್ಬ ನರ್ಸ್ ಮಹಿಳೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರು ಇಸ್ಲಾಮ್ ಎಂತಹ ಧರ್ಮವೆಂದು ನಮಗೆ ತೋರಿಸಿಕೊಟ್ಟರು. ಅದನ್ನು ಸರಿಯಾಗಿ ಜನರು ಅರ್ಥ ಮಾಡಿಕೊಂಡಿಲ್ಲ. ಭಯೋತ್ಪಾದಕರು ತಪ್ಪಾದ ರೀತಿಯಲ್ಲಿ ವರ್ತಿಸಿ ಇಸ್ಲಾಮಿನ ಹಿಂದೆ ಅಡಗಿಕೊಂಡಿರುತ್ತಾರೆ.

ಜೆ.ಪಿ. ಮತ್ತು ಚರ್ಚಿನ ಲೀಡರ್ ಆಗಿರುವ ವ್ಯಕ್ತಿ ಹೇಳಿದರು: ನಾನು ಖಲೀಫರ ಭಾಷಣ ಆಲಿಸಿದೆ. ಅದು ದಾರಿ ತೋರಿಸುವ ಬೆಳಕಿನ ಹಾಗಿತ್ತು. ಇಸ್ಲಾಮ್ ವೈಭವಶಾಲಿ ಧರ್ಮ ಎಂದು ಅದು ತೋರಿಸಿತು. ಒಂದು ಕಂಪೆನಿಯ ಡೈರೆಕ್ಟರ್ ಆಗಿರುವ ಮಹಿಳೆ ಹೇಳಿದರು: ಆಯುಧಗಳ ವ್ಯಾಪಾರದ ಬಗ್ಗೆ ಖಲೀಫರು ಹೇಳಿದುದು ನನಗೆ ಬಹಳ ಇಷ್ಟಕರವಾಗಿದೆ. ಇದು ಎಂತಹ ವಿಷಯವೆಂದರೆ ಇದಕ್ಕೆ ಸಂಬಂಧಿಸಿ ನಮ್ಮ ನೈತಿಕ ಗುಣಗಳು ನಾಶವಾಗುತ್ತಿವೆ. ವಾಣಿಜ್ಯದ ಲಾಭಗಳಿಗೆ ಆದ್ಯತೆ ನೀಡಲಾಗುತ್ತಿದೆ. ಲೋಕದ ಭವಿಷ್ಯತ್ ಸ್ಥಿತಿಯ ಬಗ್ಗೆ ಇಮಾಮರ ಮಾತುಗಳಿಂದ ಮತ್ತು ನಾವು ಒಂದು ಒಳ್ಳೆಯ ಲೋಕ ಮುಂದಿನ ಪೀಳಿಗೆಗೆ ಬಿಟ್ಟುಹೋಗುವಂತಾಗಲಿ ಎಂಬ ಪ್ರಾರ್ಥನೆಯಿಂದ ನಾನು ಭಾವಪರವಶಳಾದೆ. ನಾವು ಅಂಗವಿಕಲ ಪೀಳಿಗೆಯನ್ನು ಬಿಟ್ಟು ಹೋಗುವ ಬಗ್ಗೆ ಖಲೀಫರು ಚಿಂತಿತರೂ ಆಗಿದ್ದಾರೆ.

ಈಗ ಲೋಕದ ಸ್ಥಿತಿ ಬಹಳ ಬಿಗಡಾಯಿಸುತ್ತಿರುವ ಬಗ್ಗೆ ನಾನು ಜಮಾಅತಿನ ಗಮನ ಸೆಳೆಯಲು ಬಯಸುತ್ತೇನೆ. ಬಹಳ ಪ್ರಾರ್ಥನೆ ಮಾಡುವ ಆವಶ್ಯಕತೆ ಇದೆ. ಮಹಾಶಕ್ತಿ ರಾಷ್ಟ್ರಗಳೂ ಚಿಕ್ಕ ದೇಶಗಳೂ ಸಹ ಯುದ್ಧದ ಹುಚ್ಚು ಹೊಂದಿವೆ. ಜಾಗತಿಕ ಯುದ್ಧ ಬಹಳ ದೂರದ ವಿಷಯವೆಂದು ಸಂತೋಷದಿಂದಿದ್ದ ಲೀಡರ್‌ಗಳು ಮತ್ತು ರಾಜಕಾರಣಿಗಳು ಮತ್ತು ವೀಕ್ಷಕರು ಈಗ ಹೇಳುತ್ತಾರೆ, ಮಹಾಯುದ್ಧ ಸಂಭವಿಸುವ ಸಾಧ್ಯತೆಯನ್ನು ತಿರಸ್ಕರಿಸಲಾಗದು ಎಂದು. ಯುದ್ಧದ ಸಂಭಾವ್ಯತೆ ಹೆಚ್ಚಿಗೆ ಇದೆ ಎಂದೂ ಹೇಳುತ್ತಾರೆ. ಕೊರಿಯಾ ಮತ್ತು ಅಮೇರಿಕದ ಮಧ್ಯೆ ಇರುವ ಸಮಸ್ಯೆ ಪರಿಹರಿಸಲು ಚೀನ ಪ್ರಯತ್ನಿಸುತ್ತಿದೆ. ಕೊರಿಯಾ ಮತ್ತು ಅಮೇರಿಕ ಅಣು ಯುದ್ಧದ ಬೆದರಿಕೆ ಪರಸ್ಪರ ಒಡ್ಡುತ್ತಿವೆ. ಮುಸ್ಲಿಮ್ ಲೀಡರ್‌ಗಳು ಸಹ ದೌರ್ಜನ್ಯ ಮಾಡುತ್ತಿದ್ದಾರೆ. ಇಲ್ಲಿ ಸಹ ಬಣಗಳು ರಚಿಸಲ್ಪಡುತ್ತಿವೆ. ಒಟ್ಟಿನಲ್ಲಿ ಯುದ್ಧದ ಸಾಧ್ಯತೆ ಬಹಳಷ್ಟು ವರ್ಧಿಸುತ್ತಾ ಇದೆ. ಅವರಿಗೆಲ್ಲಾ ಅಲ್ಲಾಹನು ಬುದ್ಧಿ ನೀಡಲಿ ಎಂದು ಪ್ರಾರ್ಥಿಸಬೇಕು. ಖಲೀಫತುಲ್ ಮಸೀಹ್ ರಾಬಿಅ್ ಅಣು ಯುದ್ಧದ ದುಷ್ಪರಿಣಾಮಗಳಿಂದ ರಕ್ಷಣೆ ಪಡೆಯಲು ಕೆಲವು ಹೋಮಿಯೋಪತಿಕ್ ಮದ್ದುಗಳನ್ನು ಸೂಚಿಸಿದ್ದರು. ಆ ಮದ್ದುಗಳನ್ನು ಈಗ ಕನಿಷ್ಠ ಆರು ವಾರಗಳ ಕಾಲ ಉಪಯೋಗಿಸಬೇಕು. ಒಮ್ಮೆ ಒಂದು ಮದ್ದು ಅನಂತರ ಇನ್ನೊಂದು ಮದ್ದು ಉಪಯೋಗಿಸಬೇಕು. ಅದರ ಬಗ್ಗೆ ಪ್ರಕಟಿಸಲಾಗುವುದು. ಒಂದು ಮದ್ದು **ಕಾರ್‌ಸಿನೋಸಿನ್** (Carcinosin) ಇನ್ನೊಂದು **ರೇಡಿಯಂ ಬ್ರೋಮೈಡ್** (Radium Bromide) ಆಗಿದೆ.

ಭಾಷಣದ ಬಗ್ಗೆ ಇನ್ನೊಂದು ಅಭಿಪ್ರಾಯ ಹೀಗಿದೆ: ಪೋರ್ಚುಗಲ್ ದೇಶದ ಒಬ್ಬ ಪ್ರೊಫೆಸರ್ ಹೇಳುತ್ತಾರೆ: ನಿಮ್ಮ ಭಾಷಣದಿಂದ ಒಂದು ವಿಷಯ ಸಾಬೀತಾಯಿತು. ನ್ಯಾಯ ಮತ್ತು ಶಾಂತಿ ಸಮಾನ ಅರ್ಥ ಸೂಚಕ ಪದಗಳಾಗಿವೆ. ಒಂದು ಇಲ್ಲದೆ ಇನ್ನೊಂದು ಗಳಿಸಲು ಅಸಾಧ್ಯ. ಲೋಕದಲ್ಲಿ ನ್ಯಾಯದ ಕೊರತೆ ಇರುವುದರಿಂದಲೇ ಶಾಂತಿ ಇಲ್ಲವಾಗಿದೆ.

(ಇತರ ಅನೇಕ ಅತಿಥಿಗಳ ಅಭಿಪ್ರಾಯಗಳನ್ನು ಮತ್ತು ಪೀಸ್ ಸಿಂಪೋಸಿಯಂ ಮೂಲಕ ನಡೆದ ತಬ್ಲೀಗ್ ಬಗ್ಗೆ ಪ್ರಸ್ತಾಪಿಸಿ ಹುಝೂರ್ ಹೇಳಿದರು:) ಸೋಶಿಯಲ್ ಮೀಡಿಯಾ ಮೂಲಕ 3.8 ಮಿಲಿಯ ಜನರಿಗೆ ಸಂದೇಶ ತಲಪಿದೆ. ನಮ್ಮ ಸಂದೇಶ ವ್ಯಾಪಕವಾಗಿ ಹರಡುವಾಗ ವಿರೋಧಗಳು ಸಹ ವಿಶೇಷವಾಗಿ ಮುಸ್ಲಿಮ್ ದೇಶಗಳಲ್ಲಿ ವರ್ಧಿಸುತ್ತಿವೆ. ಅಲ್‌ಜೀರಿಯಾದಲ್ಲಿ ಬಹಳ ಹೆಚ್ಚು ವಿರೋಧ ಉಂಟಾಗಿದೆ. ಇದು ವರ್ಧಿಸುತ್ತಾ ಇದೆ. ಅಲ್ಲಿನ ಅಹ್ಮದಿಯರ ಬಗ್ಗೆ ಪ್ರಾರ್ಥಿಸಲು ಇದರ ಮೊದಲು ಹೇಳಿದ್ದೇನೆ.

ಅಲ್‌ಜೀರಿಯಾದ ಅಹ್ಮದಿಯರಿಗೋಸ್ಕರ ಪ್ರಾರ್ಥಿಸಿರಿ. ಪಾಕಿಸ್ಥಾನದ ಅಹ್ಮದಿಯರಿಗೋಸ್ಕರ ಸಹ ಪ್ರಾರ್ಥಿಸಿರಿ. ಅಹ್ಮದಿಯ್ಯತ್ ವಿರುದ್ಧ ವಿರೋಧ ಹೆಚ್ಚು ಕುದಿಯುತ್ತಿರುವ ದೇಶಗಳ ಅಹ್ಮದಿಯರ ಬಗ್ಗೆಯೂ ಪ್ರಾರ್ಥಿಸಿರಿ. ಅಲ್ಲಾಹನು ಎಲ್ಲರನ್ನೂ ಸಂರಕ್ಷಿಸಲಿ. ಅಲ್‌ಜೀರಿಯಾದ ಅಹ್ಮದಿಯರಿಗಾಗಿ ವಿಶಿಷ್ಟವಾಗಿ ಪ್ರಾರ್ಥಿಸಿರಿ. ಅಲ್ಲಿನ ಅಹ್ಮದಿಯರು ಹೆಚ್ಚು ಹಳೆಯ ಅಹ್ಮದಿಯರೇನೂ ಅಲ್ಲ. ಅಲ್ಲಾಹನು ಅವರಿಗೆ ಸ್ಥಿರತೆ ನೀಡುವವನಾಗಲಿ. ಅವರ ಕಷ್ಟಗಳನ್ನು ಬೇಗನೆ ದೂರ ಸರಿಸುವವನಾಗಲಿ – ಆಮೀನ್.

—————*****—————


***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London on 28-04-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon